**All India Radio: Bangalore**
**National Bulletin In Kannada**
**30.05.2025 / 7.35 am**

ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

**30.05.2025 / 7.35 am**

**<><*<><>*><>**

ಮುಖ್ಯಾಂಶಗಳು

೧. ಬಿಹಾರ ಮತ್ತು ಉತ್ತರಪ್ರದೇಶದಲ್ಲಿಂದು ೬೭ ಸಾವಿರ ಕೋಟಿ ಮೌಲ್ಯದ ವಿವಿಧ ಅಭಿವೃದ್ಧಿ ಯೋಜನೆಗಳನ್ನು ಉದ್ಘಾಟಿಸಲಿರುವ ಪ್ರಧಾನಿ ನರೇಂದ್ರ ಮೋದಿ

೨. ಜಮ್ಮುವಿನಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಭದ್ರತಾ ಪರಿಶೀಲನಾ ಸಭೆ

೩. ಐದನೇ ತಲೆಮಾರಿನ ಸುಧಾರಿತ ಮಧ್ಯಮ ಯುದ್ಧ ವಿಮಾನ-ಎಎಂಸಿಎಯ ಐದು ಮಾದರಿಗಳನ್ನು ಅಭಿವೃದ್ಧಿಪಡಿಸಲು ಭಾರತ ಯೋಜನೆ

೪. ಐಪಿಎಲ್ ಟಿ-೨೦ ಕ್ರಿಕೆಟ್; ಪಂಜಾಬ್ ಕಿಂಗ್ಸ್ ವಿರುದ್ಧ ಗೆದ್ದು, ಫೈನಲ್‌ಗೆ ಲಗ್ಗೆ ಇಟ್ಟ ರಾಯಲ್ ಚ್ಯಾಲೆಂಜರ್ಸ್ ಬೆಂಗಳೂರು

************

ಬಿಹಾರ ಮತ್ತು ಉತ್ತರ ಪ್ರದೇಶದಲ್ಲಿಂದು ಪ್ರಧಾನಮಂತ್ರಿ ನರೇಂದ್ರ ಮೋದಿ ೬೭ ಸಾವಿರ ಕೋಟಿ ಮೌಲ್ಯದ ವಿವಿಧ ಅಭಿವೃದ್ಧಿ ಯೋಜನೆಗಳನ್ನು ಉದ್ಘಾಟಿಸಲಿದ್ದಾರೆ. ಬಿಹಾರದ ರೋಹ್ತಾಸ್ ಜಿಲ್ಲೆಯ ಬಿಕ್ರಮಗಂಜ್‌ನಲ್ಲಿಂದು ಪ್ರಧಾನಮಂತ್ರಿ ನರೇಂದ್ರ ಮೋದಿ ೪೮ ಸಾವಿರದ ೫೨೦ ಕೋಟಿ ಮೌಲ್ಯದ ವಿವಿಧ ಅಭಿವೃದ್ಧಿ ಯೋಜನೆಗಳನ್ನು ಉದ್ಘಾಟನೆ, ಶಂಕುಸ್ಥಾಪನೆ ಹಾಗೂ ರಾಷ್ಟ್ರಕ್ಕೆ ಸಮರ್ಪಿಸಲಿದ್ದಾರೆ. ಈ ಸಂದರ್ಭದಲ್ಲಿ ಅವರು ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಲಿದ್ದಾರೆ.ಇಂಧನ, ರಸ್ತೆ ಮತ್ತು ರೈಲ್ವೆ ಸಂಪರ್ಕ ಸಂಬಂಧಿತ ಹಲವು ಯೋಜನೆಗಳಿಗೆ ಇಂದು ಚಾಲನೆ ದೊರೆಯಲಿದೆ. ಔರಂಗಾಬಾದ್ ಜಿಲ್ಲೆಯ ನಬಿನಗರ ಸೂಪರ್ ಉಷ್ಣ ವಿದ್ಯುತ್

ಯೋಜನೆಯ ಹಂತ-೨ರ ಶಂಕುಸ್ಥಾಪನೆಯನ್ನು ಪ್ರಧಾನಿ ನೆರವೇರಿಸಲಿದ್ದಾರೆ. ಮೂರು ಘಟಕಗಳನ್ನು ಹೊಂದಿರುವ ಈ ೨ ಸಾವಿರದ ೪೦೦ ಮೆಗಾವಾಟ್ ಸಾಮರ್ಥ್ಯದ ವಿದ್ಯುತ್ ಯೋಜನೆಯು ಸುಮಾರು ೨೯ ಸಾವಿರದ ೯೩೦ ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಿಸಲಾಗುತ್ತಿದೆ. ಹಾಲವು ರಸ್ತೆ ಕಾಮಗಾರಿಗಳಿಗೂ ಪ್ರಧಾನಿ ಶಂಕುಸ್ಥಾಪನೆ ಮಾಡುವ ಕಾರ್ಯಕ್ರಮವಿದೆ. ಇದರಲ್ಲಿ ರಾಷ್ಟ್ರೀಯ ಹೆದ್ದಾರಿ-೧೧೯-ಎ ಯ ಪಾಟ್ನಾ-ಆರಾ-ಸಸಾರಾಂ ಭಾಗದ ಚತುಷ್ಪಥ ರಸ್ತೆಯ ನಿರ್ಮಾಣ, ರಾಷ್ಟ್ರೀಯ ಹೆದ್ದಾರಿ -೩೧೯-ಬಿ ಯ ವಾರಾಣಸಿ-ರಾಂಚಿ-ಕೋಲ್ಕತ್ತಾ ಹೆದ್ದಾರಿಯ ಷಟ್ಪಥ ರಸ್ತೆ ಹಾಗೂ ರಾಷ್ಟ್ರೀಯ ಹೆದ್ದಾರಿ-೧೧೯-ಡಿ ನ ರಾಮನಗರ-ಕಚ್ಚಿ ದರ್ಗಾ ಭಾಗಗಳ ನಿರ್ಮಾಣ ಸೇರಿವೆ. ಬಕ್ಸರ್ ಮತ್ತು ಭರೌಲಿ ನಡುವೆ ಹೊಸ ಗಂಗಾ ಸೇತುವೆಯ ನಿರ್ಮಾಣಕ್ಕೂ ಚಾಲನೆ ನೀಡಲಾಗುವುದು. ಪಾಟ್ನಾ-ಗಯಾ-ಡೋಭಿ ಭಾಗದ ರಾಷ್ಟ್ರೀಯ ಹೆದ್ದಾರಿ-೨೨ರ ೫ ಸಾವಿರದ ೫೨೦ ಕೋಟಿ ಮೌಲ್ಯದ ಚತುಷ್ಪಥ ರಸ್ತೆ ಯೋಜನೆಗಳನ್ನು ಪ್ರಧಾನಮಂತ್ರಿ ಉದ್ಘಾಟಿಸಲಿದ್ದಾರೆ. ಜೊತೆಗೆ ೧ ಸಾವಿರದ ೩೩೦ ಕೋಟಿ ರೂಪಾಯಿ ಮೌಲ್ಯದ ಸೋನ್ ನಗರ ಮತ್ತು ಮೊಹಮ್ಮದ್ ಗಂಜ್ ನಡುವಿನ ಮೂರನೇ ರೈಲು ಮಾರ್ಗವನ್ನು ಪ್ರಧಾನಿ ರಾಷ್ಟ್ರಕ್ಕೆ ಸಮರ್ಪಿಸಲಿದ್ದಾರೆ. ಇಂದು ಮಧ್ಯಾಹ್ನ, ಉತ್ತರ ಪ್ರದೇಶದ ಕಾನ್ಪುರ್‌ನಲ್ಲಿ ೪೭ ಸಾವಿರದ ೬೦೦ ಕೋಟಿ ಮೌಲ್ಯದ ವಿವಿಧ ಅಭಿವೃದ್ಧಿ ಯೋಜನೆಗಳ ಉದ್ಘಾಟನೆ ಮತ್ತು ಶಂಕುಸ್ಥಾಪನೆಯನ್ನು ಪ್ರಧಾನಮಂತ್ರಿ ನೆರವೇರಿಸಲಿದ್ದಾರೆ. ಈ ಯೋಜನೆಗಳು ಆ ಪ್ರದೇಶದ ಮೂಲಸೌಕರ್ಯ ಅಭಿವೃದ್ಧಿ ಮತ್ತು ಸಂಪರ್ಕ ಸುಧಾರಣೆಯ ಕಡೆಗೆ ಪ್ರಮುಖ ಹೆಜ್ಜೆಯಾಗಿವೆ.

************

ಕೇಂದ್ರ ಗೃಹ ಸಚಿವ ಅಮಿತ್ ಶಾ ಜಮ್ಮುವಿನಲ್ಲಿ ಕಳೆದ ರಾತ್ರಿ ಉನ್ನತ ಮಟ್ಟದ ಭದ್ರತಾ ಪರಿಶೀಲನಾ ಸಭೆ ನಡೆಸಿದರು.ಈ ವೇಳೆ ಜಮ್ಮು ಮತ್ತು ಕಾಶ್ಮೀರದ ಭದ್ರತಾ ಪರಿಸ್ಥಿತಿಯ ಪರಿಶೀಲನೆಯ ಜೊತೆಗೆ ಈ ವರ್ಷದ ಜುಲೈ ೩ರಂದು ಆರಂಭಗೊಳ್ಳಲಿರುವ ವಾರ್ಷಿಕ ಅಮರನಾಥ ಯಾತ್ರೆಯ ಭದ್ರತೆ ಮತ್ತು ಇತರ ಸಿದ್ಧತೆಗಳ ಕುರಿತಾಗಿ ಸಮಾಲೋಚನೆ ನಡೆಸಿದರು. ಯಾತ್ರೆಗೆ ಕೈಗೊಂಡಿರುವ ಭದ್ರತಾ ಕ್ರಮಗಳ ಕುರಿತು ಅವರಿಗೆ ಅಧಿಕಾರಿಗಳು ವಿವರಿಸಿದರು.ಈ ಸಭೆಯಲ್ಲಿ ಜಮ್ಮು ಮತ್ತು ಕಾಶ್ಮೀರದ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ, ಸೇನಾ ಮುಖ್ಯಸ್ಥ ಜನರಲ್ ಉಪೇಂದ್ರ ದಿವೇದಿ, ಕೇಂದ್ರ ಗೃಹ ಕಾರ್ಯದರ್ಶಿ ಗೋವಿಂದ್ ಮೋಹನ್, ಜಮ್ಮು ಮತ್ತು ಕಾಶ್ಮೀರದ ಮುಖ್ಯ ಕಾರ್ಯದರ್ಶಿ ಅಟಲ್ ದುಲ್ಲೂ, ವಿವಿಧ ಸಶಸ್ತ್ರ

ಪಡೆಗಳ ಮುಖ್ಯಸ್ಥರು, ಪೊಲೀಸ್ ಹಾಗೂ ಗುಪ್ತಚರ ಸಂಸ್ಥೆಗಳ ಪ್ರತಿನಿಧಿಗಳು ಉಪಸ್ಥಿತರಿದ್ದರು.ಸಚಿವ ಅಮಿತ್ ಶಾ ಅವರು ಎರಡು ದಿನಗಳ ಕೇಂದ್ರಾಡಳಿತ ಪ್ರದೇಶದ ಪ್ರವಾಸಕ್ಕಾಗಿ ನಿನ್ನೆ ಸಂಜೆ ಜಮ್ಮುವಿಗೆ ಆಗಮಿಸಿದರು. ಇಂದು ಗೃಹ ಸಚಿವ ಅಮಿತ್ ಶಾ ಅವರು ಪಾಕಿಸ್ತಾನದ ಶೆಲ್ ದಾಲಿಯಿಂದ ಪ್ರಭಾವಿತ ಪೂಂಚ್ ಜಿಲ್ಲೆಗೆ ಭೇಟಿ ನೀಡಲಿದ್ದಾರೆ. ಅಲ್ಲಿ ಅವರು ದಾಳಿಯ ಸಂತ್ರಸ್ತರನ್ನು ಭೇಟಿ ಮಾಡಲಿದ್ದು, ಹಾನಿಗೊಂಡ ಧಾರ್ಮಿಕ ಸ್ಥಳಗಳಿಗೆ ಭೇಟಿ ನೀಡಿ, ಅಧಿಕಾರಿಗಳೊಂದಿಗೆ ಸಭೆ ನಡೆಸಲಿದ್ದಾರೆ. ಅಮಿತ್ ಶಾ ಅವರು ಪೂಂಚ್‌ನ ಗಡಿಭದ್ರತಾ ಪಡೆ ಶಿಬಿರಕ್ಕೂ ಭೇಟಿ ನೀಡಲಿದ್ದು, ಅಲ್ಲಿ ನಿಯೋಜಿತ ಜವಾನರೊಂದಿಗೆ ಸಂವಾದ ನಡೆಸಲಿದ್ದಾರೆ.

************

ಭಾರತದ ಐದನೇ ತಲೆಮಾರಿನ ಸ್ಟೆಲ್ತ್ ಫೈಟರ್ ಜೆಟ್ ಸುಧಾರಿತ ಮಧ್ಯಮ ಯುದ್ಧ ವಿಮಾನ - ಎಎಂಸಿಎ ನಿರ್ಮಾಣದ ಮೊದಲು ಐದು ಮಾದರಿಗಳನ್ನು ಅಭಿವೃದ್ಧಿಪಡಿಸಲು ಯೋಜನೆ ರೂಪಿಸಲಾಗಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ತಿಳಿಸಿದ್ದಾರೆ. ದೆಹಲಿಯಲ್ಲಿ ನಡೆದ ಸಿಐಐ ಉದ್ಯಮ ಶೃಂಸಭೆಯಲ್ಲಿ ಮಾತನಾಡಿದ ಅವರು, "ಮೇಕ್ ಇನ್ ಇಂಡಿಯಾ ಯೋಜನೆ ದೇಶದ ಭದ್ರತೆಯ ಅವಿಭಾಜ್ಯ ಅಂಗವಾಗಿ ಹೊರಹೊಮ್ಮಿದ್ದು, ಆಪರೇಶನ್ ಸಿಂದೂರ್ ವೇಳೆ ಭಯೋತ್ಪಾದನಾ ವಿರೋಧಿ ಕಾರ್ಯಾಚರಣೆಯಲ್ಲಿ ಪ್ರಮುಖ ಪಾತ್ರವಹಿಸಿದೆ ಎಂದರು.ಎಎಂಸಿಎ ಯೋಜನೆಯ ಮೂಲಕ ಸಾರ್ವಜನಿಕ ಕ್ಷೇತ್ರದ ಜೊತೆಗೆ ಖಾಸಗಿ ಸಂಸ್ಥೆಗಳಿಗೂ ಈ ಯೋಜನೆಯಲ್ಲಿ ಕೊಡುಗೆ ನೀಡಲು ಅವಕಾಶ ಕಲ್ಪಿಸಲಾಗಿದೆ ಎಂದು ಅವರು ವಿವರಿಸಿದರು. ಈ ಸ್ಟೆಲ್ತ್ ಫೈಟರ್ ಜೆಟ್ ಅನ್ನು ಹೆಚ್‌ಎಎಲ್ ಮತ್ತು ಖಾಸಗಿ ಕಂಪನಿಗಳ ಸಹಭಾಗಿತ್ವದಲ್ಲಿ ರೂಪಿಸಲು ರಕ್ಷಣಾ ಸಚಿವಾಲಯ ಅನುಮೋದನೆ ನೀಡಿದೆ. ಮಧ್ಯಮ ತೂಕದ, ಆಧುನಿಕ ಸ್ಟೆಲ್ತ್ ವೈಶಿಷ್ಟ್ಯಗಳಿರುವ ಅತಿದೂರದ ಪ್ರಹಾರ ಸಾಮರ್ಥ್ಯದ ಎಎಂಸಿಎ ಯನ್ನು ಅಭಿವೃದ್ಧಿಪಡಿಸಲು ಭಾರತ ಕೆಲಸ ಮಾಡುತ್ತಿದೆ.

************

ಭಾರತ ಮತ್ತು ನ್ಯೂಜಿಲೆಂಡ್ ನಡುವಿನ ಸಂಬಂಧಗಳು ವಿಭಿನ್ನ ಕ್ಷೇತ್ರಗಳಲ್ಲಿ ವಿಸ್ತರಿಸುತ್ತಿವೆ ಎಂದು ವಿದೇಶಾಂಗ ಸಚಿವ ಡಾ. ಎಸ್. ಜೈಶಂಕರ್ ಹೇಳಿದ್ದಾರೆ. ದೆಹಲಿಯಲ್ಲಿ ನಿನ್ನೆ ನ್ಯೂಜಿಲೆಂಡ್

ಉಪಪ್ರಧಾನಿ ಮತ್ತು ವಿದೇಶಾಂಗ ಸಚಿವ ವಿನ್‌ಸ್ಟನ್ ಪೀಟರ್ಸ್ ಅವರೊಂದಿಗೆ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಇತ್ತೀಚೆಗಷ್ಟೇ ನ್ಯೂಜಿಲೆಂಡ್ ಪ್ರಧಾನಿ ಕ್ರಿಸ್ಟೋಫರ್ ಲಕ್ಸನ್ ಅವರು ಭಾರತಕ್ಕೆ ನೀಡಿದ ಯಶಸ್ವಿ ಭೇಟಿಯ ಕುರಿತು ಪ್ರಸ್ತಾಪಿಸಿದರು. ಈ ಭೇಟಿಯ ವೇಳೆ ಉಭಯ ದೇಶಗಳು ಮುಕ್ತ ವ್ಯಾಪಾರ ಒಪ್ಪಂದದ ಚರ್ಚೆ ಆರಂಭಿಸಿ ಹಲವು ಒಪ್ಪಂದಗಳಿಗೆ ಸಹಿ ಹಾಕಿವೆ ಎಂದು ತಿಳಿಸಿದರು.ವಿನ್‌ಸ್ಟನ್ ಪೀಟರ್ಸ್ ಅವರು ನಿನ್ನೆ ಎರಡು ದಿನಗಳ ಅಧಿಕೃತ ಭೇಟಿಗಾಗಿ ದೆಹಲಿಗೆ ಆಗಮಿಸಿದರು. ಸಾಮಾಜಿಕ ಜಾಲತಾಣದಲ್ಲಿ ವಿದೇಶಾಂಗ ಸಚಿವಾಲಯದ ಪ್ರತಿನಿಧಿ ರಂಧೀರ್ ಜೈಸ್ವಾಲ್ ಅವರು, ಈ ಭೇಟಿಯು ಭಾರತ ಮತ್ತು ನ್ಯೂಜಿಲೆಂಡ್ ನಡುವಿನ ಉನ್ನತ ಮಟ್ಟದ ಸಂಪರ್ಕಗಳಿಗೆ ಹೊಸ ಗತಿ ನೀಡುತ್ತದೆ ಎಂದಿದ್ದಾರೆ. ತಮ್ಮ ಭೇಟಿಯ ಭಾಗವಾಗಿ ಪೀಟರ್ಸ್ ಅವರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಜೆ.ಪಿ. ನಡ್ಡಾ ಅವರಿಗೂ ಭೇಟಿ ಮಾಡಲಿದ್ದಾರೆ.ಸಾಮಾಜಿಕ ಜಾಲತಾಣದಲ್ಲಿ ಡಾ. ಜೈಶಂಕರ್ ಮಾತನಾಡಿ, ಪಹಲ್ಗಾಂ ಉಗ್ರ ದಾಳಿ ಸಂದರ್ಭದಲ್ಲಿ ನ್ಯೂಜಿಲೆಂಡ್ ನೀಡಿದ ಬೆಂಬಲಕ್ಕೆ ಕೃತಜ್ಞತೆ ವ್ಯಕ್ತಪಡಿಸಿದ್ದಾರೆ. ಅಸ್ಥಿರ ಜಾಗತಿಕ ಪರಿಸ್ಥಿತಿಯಲ್ಲಿ, ನಿಯಮಾಧಾರಿತ, ಶಾಂತಿಯುತ ಹಾಗೂ ಸಮೃದ್ಧ ಇಂಡೋ-ಪೆಸಿಫಿಕ್ ಪ್ರದೇಶಕ್ಕಾಗಿ ಭಾರತ ಮತ್ತು ನ್ಯೂಜಿಲೆಂಡ್ ಒಟ್ಟಾಗಿ ಕೆಲಸ ಮಾಡುವ ಒಮ್ಮತಕ್ಕೆ ಬಂದಿರುವುದಾಗಿ ಅವರು ತಿಳಿಸಿದ್ದಾರೆ. ************

ಪ್ರಸಾರ ಭಾರತಿಯ ಶಬ್ದ್ ಪೋರ್ಟಲ್‌ನ ಉಚಿತ ಸೇವೆಗಳಿಗೆ ನೋಂದಾಯಿಸಿಕೊಳ್ಳಲು ಯೂಟ್ಯೂಬರ್‌ಗಳು, ಪಾಡ್‌ಕ್ಯಾಸ್ಟರ್‌ಗಳು ಮತ್ತು ವೀಡಿಯೊ ಸಂಪಾದಕರನ್ನು ಆಹ್ವಾನಿಸಲಾಗಿದೆ. ಪ್ರಸಾರ ಭಾರತಿ ಶಬ್ದ್ ಹಕ್ಕುಸ್ವಾಮ್ಯ - ಮುಕ್ತ, ಅಧಿಕೃತ ಮತ್ತು ಬಳಸಲು ಸುರಕ್ಷಿತ ವಿಷಯಕ್ಕಾಗಿ ಒಂದು ಸುಲಭ ಮೂಲವಾಗಿದೆ. ಪ್ರಸಾರ ಭಾರತಿ ಶಬ್ದ್ ಯಾವುದೇ ನೋದಣಿ ಶುಲ್ಕ ಅಥವಾ ಅಪಾಯವಿಲ್ಲದೆ ಯೂಟ್ಯೂಬರ್‌ಗಳು ಮತ್ತು ರಚನಾಕಾರರಿಗೆ ಉಚಿತ, ಅಧಿಕೃತ ಮಾಧ್ಯಮ ವಿಷಯವನ್ನು ನೀಡುತ್ತದೆ. ಪ್ರಸಾರ ಭಾರತಿ ಶಬ್ದ್ ೧,೫೦೦ ಕ್ಕೂ ಹೆಚ್ಚು ವರದಿಗಾರರ ದೃಢವಾದ ಜಾಲವನ್ನು ಹೊಂದಿದೆ, ಸಮಗ್ರ ಪ್ರಸಾರವನ್ನು ಒದಗಿಸಲು ೨೪ ಗಂಟೆ ಕಾರ್ಯನಿರ್ವಹಿಸುವ ೬೦ ಮೀಸಲಾದ ಸಂಪಾದಕರಿಂದ ಕೂಡಿದೆ. ದೇಶಾದ್ಯಂತದ ಸುದ್ದಿ ಪೋರ್ಟಲ್‌ಗಳು ಶಬ್ದ್ ಮೂಲಕ ದೂರದರ್ಶನ ಮತ್ತು ಆಕಾಶವಾಣಿಯ ವಿಶ್ವಾಸಾರ್ಹ ಭಂಡಾರವನ್ನು ಅವಲೋಕಿಸಬಹುದು. ಕೃಷಿ, ತಂತ್ರಜ್ಞಾನ, ವಿದೇಶಾಂಗ ವ್ಯವಹಾರಗಳು ಮತ್ತು ರಾಜಕೀಯ ಬೆಳವಣಿಗೆಗಳಂತಹ ೫೦ ಕ್ಕೂ ಹೆಚ್ಚು ಸುದ್ದಿ ವಿಭಾಗಗಳನ್ನು ಒಳಗೊಂಡ ೧,೦೦೦ ಕ್ಕೂ ಹೆಚ್ಚು ವಿಷಯವನ್ನು ಒಳಗೊಂಡಿರುವ

ಶಬ್ದ್ ನಲ್ಲಿ ಎಲ್ಲಾ ಪ್ರಮುಖ ಭಾರತೀಯ ಭಾಷೆಗಳಲ್ಲಿ ಸುದ್ದಿಗಳನ್ನು ಪ್ರತಿದಿನ ಅಪ್‌ಲೋಡ್ ಮಾಡಲಾಗುತ್ತದೆ.

************

ಚಂಡೀಗಢದಲ್ಲಿ ಕಳೆದ ರಾತ್ರಿ ನಡೆದ  ಐಪಿಎಲ್ ಟಿ೨೦ ಕ್ರಿಕೆಟ್ ಪಂದ್ಯಾವಳಿಯ ಮೊದಲ ಕ್ವಾಲಿಫೈಯರ್ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ಪಂಜಾಬ್ ಕಿಂಗ್ಸ್ ತಂಡವನ್ನು ೮ ವಿಕೆಟ್‌ಗಳಿಂದ ಸೋಲಿಸುವ ಮೂಲಕ ಫೈನಲ್‌ಗೆ ಲಗ್ಗೆಯಿಟ್ಟಿದೆ.ಪಂಜಾಬ್ ಕಿಂಗ್ಸ್ ನೀಡಿದ್ದ ೧೦೨ ರನ್‌ಗಳ ಗುರಿಯನ್ನು ಬೆನ್ನಟ್ಟಿದ ಆರ್‌ಸಿಬಿ ಕೇವಲ ೧೦ ಓವರ್‌ಗಳಲ್ಲಿ ೨ ವಿಕೆಟ್ ನಷ್ಟಕ್ಕೆ ೧೦೬ ರನ್ ಗಳಿಸಿತು. ಇದಕ್ಕೂ ಮೊದಲು, ಪಂಜಾಬ್ ೧೪.೧ ಓವರ್‌ಗಳಲ್ಲಿ ತನ್ನೆಲ್ಲಾ ವಿಕೆಟ್ ಕಳೆದುಕೊಂಡು ಕೇವಲ ೧೦೧ ರನ್‌ಗಳಿಸಲಷ್ಟೇ ಶಕ್ತವಾಯಿತು. ಜೋಶ್ ಹೇಸಲ್‌ವುಡ್ ಮತ್ತು ಸುಯಶ್ ಶರ್ಮಾ ತಲಾ ಮೂರು ವಿಕೆಟ್‌ಗಳನ್ನು ಪಡೆದರು.ಇದರ ಬೆನ್ನಲ್ಲೇ ಕ್ವಾಲಿಫೈಯರ್ ೨ ರ ವಿಜೇತ ತಂಡ ಜೂನ್ ೩ ರಂದು ನಡೆಯುವ ಫೈನಲ್‌ನಲ್ಲಿ ಆರ್‌ಸಿಬಿಯನ್ನು ಎದುರಿಸಲಿದೆ.

************

ದಕ್ಷಿಣ ಕೊರಿಯಾದ ಗುಮಿಯಲ್ಲಿ ನಡೆದ ಏಷ್ಯನ್ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನಲ್ಲಿ ೧೦೦ ಮೀ ಹರ್ಡಲ್ಸ್ ಓಟದಲ್ಲಿ ಭಾರತೀಯ ಆಟಗಾರ್ತಿ ಜ್ಯೋತಿ ಯರ್ರಾಜಿ ಭಾರೀ ಮಳೆಯ ನಡುವೆಯೂ ೧೨.೦೬ ಸೆಕೆಂಡುಗಳ ಕಾಂಟಿನೆಂಟಲ್ ದಾಖಲೆಯ ಸಮಯದೊಂದಿಗೆ ಮಹಿಳೆಯರ ನೂರು ಮೀಟರ್ ಹರ್ಡಲ್ಸ್ ಓಟ ಸ್ಪರ್ಧೆ ಗೆಲ್ಲುವುದರ ಮೂಲಕ ಚಿನ್ನದ ಪದಕ ತಮ್ಮದಾಗಿಸಿಕೊಂಡಿದ್ದಾರೆ.

<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>

<><*<> ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ ೧೨ ಕ್ಕೆ <>*><>